# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ವಿಆ(ಘ.ತ್ಯಾ.ನಿ)/ಪಿಆರ್/ 29 /2016-17

ವಿಶೇಷ ಆಯುಕ್ತರು (ಘ.ತ್ಯಾ.ನಿ/ಆ)ರವರಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:05.05.2016.

## :: ಕಛೇರಿ ಆದೇಶ ::

ವಿಷಯಃ ದಿನಾಂಕ:07.05.2016 ಮತ್ತು 08.05.2016 ರಂದು ವಿಭಾಗ ವ್ಯಾಪ್ತಿಯಲ್ಲಿ ಬರುವ ಮಳೆ ನೀರು ನುಗ್ಗುವ ತಗ್ಗು ಪ್ರದೇಶಗಳಲ್ಲಿನ ಚರಂಡಿಗಳಲ್ಲಿ, ಶೋಲ್ಡರ್ ಡ್ರೈನ್‌ಗಳಲ್ಲಿ ಮತ್ತು ಅಗತ್ಯವಿರುವ ರಾಜ ಕಾಲುವೆಗಳಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಳ್ಳುವ ಕುರಿತು.

ಉಲ್ಲೇಖಃ
1. ಈ ಕಛೇರಿಯ ಸುತ್ತೋಲೆ-7ರ ಪತ್ರದ ಸಂಖ್ಯೆ:ವಿಆ/ಘತ್ಯಾಆ/ಪಿಆರ್ /44/2015-16 ದಿನಾಂಕ:25.01.2016.
2. ಈ ಕಛೇರಿ ಪತ್ರದ ಸಂಖ್ಯೆ:ವಿ.ಆ(ಘ.ತ್ಯಾ.ನಿ)/ಪಿಆರ್/20/2016-17 ದಿನಾಂಕ:26.04.2016.
3. ಪೂಜ್ಯ ಮಹಾಪೌರರ ಪತ್ರದ ಸಂಖ್ಯೆ:ಎಂಪಿಎಸ್/ಪಿಆರ್/129/2016-17 ದಿನಾಂಕ:03.05.2016.

*****

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ವಾರಕ್ಕೊಮ್ಮೆ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿರುವುದು ಸರಿಯಷ್ಟೆ. ಮಳೆಗಾಲ ಪ್ರಾರಂಭವಾಗುವ ಹಿನ್ನಲೆಯಲ್ಲಿ ದಿನಾಂಕ:30.04.2016 ಮತ್ತು 07.05.2016 ರಂದು ವಿಭಾಗ ವ್ಯಾಪ್ತಿಯಲ್ಲಿ ಬರುವ ಮಳೆ ನೀರು ನುಗ್ಗುವ ತಗ್ಗು ಪ್ರದೇಶಗಳಲ್ಲಿನ ಚರಂಡಿಗಳಲ್ಲಿ, ಶೋಲ್ಡರ್ ಡ್ರೈನ್‌ಗಳಲ್ಲಿ ಮತ್ತು ಅಗತ್ಯವಿರುವ ರಾಜ ಕಾಲುವೆಗಳಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಂಡು ಯಶಸ್ವಿಗೊಳಿಸಲು ಉಲ್ಲೇಖ ಪತ್ರ (2)ರಲ್ಲಿ ಈಗಾಗಲೇ ಸೂಚನೆ ನೀಡಲಾಗಿತ್ತು. ಉಲ್ಲೇಖ ಪತ್ರ (3)ರಲ್ಲಿ ಪೂಜ್ಯ ಮಹಾಪೌರರು ಮಳೆಗಾಲಕ್ಕೆ ಮುಂಚೆ ನಗರದಲ್ಲಿನ ಎಲ್ಲಾ ರಸ್ತೆ ಸುರಂಗ ಮಾರ್ಗಗಳಲ್ಲಿನ (ಅಂಡರ್‌ಪಾಸ್‌ಗಳನ್ನು) ಸೈಡ್ ಡ್ರೈನ್, ಶೋಲ್ಡರ್ ಡ್ರೈನ್ ಮತ್ತು ಡೆಬ್ರಿಸ್/ಕಸವನ್ನು ತೆರವುಗೊಳಿಸುವುದು ಅತ್ಯವಶ್ಯಕವಾಗಿದೆ ಈ ಹಿನ್ನಲೆಯಲ್ಲಿ ಮುಂದಿನ ಶನಿವಾರ ಮತ್ತು ಭಾನುವಾರ ದಿನಾಂಕ:07.05.2016 ಮತ್ತು 08.05.2016 ರಂದು 2ದಿನಗಳ ಕಾಲ "ಎಲ್ಲಾ ರಸ್ತೆ ಸುರಂಗ ಮಾರ್ಗಗಳಲ್ಲಿನ (ಅಂಡರ್‌ಪಾಸ್‌ಗಳನ್ನು) ಸೈಡ್ ಡ್ರೈನ್, ಶೋಲ್ಡರ್ ಡ್ರೈನ್ ಮತ್ತು ಡೆಬ್ರಿಸ್/ಕಸವನ್ನು" ತೆಗೆಯುವ ಅಭಿಯಾನವಾಗಿ ಕೈಗೊಂಡು ಎಲ್ಲಾ ಉಪವಿಭಾಗದ ಇಂಜಿನೀಯರ್‌ಗಳು ಮತ್ತು ಹೆಲ್ತ್ ಇನ್‌ಪೆಕ್ಟರ್‌ಗಳು ಕಡ್ಡಾಯವಾಗಿ ಪಾಲ್ಗೊಂಡು ಕರ್ತವ್ಯ ನಿರ್ವಹಿಸಲು ಸೂಚಿಸಿರುತ್ತಾರೆ.

**ಈ ಹಿನ್ನಲೆಯಲ್ಲಿ ಶನಿವಾರ ಮತ್ತು ಭಾನುವಾರ ದಿನಾಂಕ:07.05.2016 ಮತ್ತು 08.05.2016 ರಂದು 2ದಿನಗಳ ಕಾಲ "ಎಲ್ಲಾ ರಸ್ತೆ ಸುರಂಗ ಮಾರ್ಗಗಳಲ್ಲಿನ (ಅಂಡರ್‌ಪಾಸ್‌ಗಳನ್ನು) ಸೈಡ್ ಡ್ರೈನ್, ಶೋಲ್ಡರ್ ಡ್ರೈನ್ ಮತ್ತು ಡೆಬ್ರಿಸ್/ಕಸವನ್ನು" ತೆಗೆಯಲು ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಳ್ಳಲು ಸೂಚಿಸಿದೆ.**

ಮುಂದುವರೆದಂತೆ ಈ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮದ ಕುರಿತು ಈಗಾಗಲೇ ದಿನಾಂಕ:25.01.2016ರಂದು ಹೊರಡಿಸಿರುವ ಸುತ್ತೋಲೆ-7 ರಂತೆ ಕಡ್ಡಾಯವಾಗಿ ಕ್ರಮ ವಹಿಸುವುದು

**ಹಾಗೂ ಆಯಾ ವಿಭಾಗದ ಎಲ್ಲಾ ವಾರ್ಡ್‌ಗಳಿಂದ ಪೌರಕಾರ್ಮಿಕರು, ಸಿಲ್ಟ್ ಅಂಡ್‌ಟ್ರಾಕ್ಟರ್, ಇಂಜಿನಿಯರಿಂಗ್ ಗ್ಯಾಂಗ್‌ಮನ್‌ರವರನ್ನು ತಪ್ಪದೇ ಒಗ್ಗೂಡಿಸಿ ಅಗತ್ಯವಿರುವ ಎಲ್ಲಾ ವಾಹನಗಳನ್ನು ಉಪಯೋಗಿಸಿಕೊಂಡು ಮಳೆ ನೀರು ನುಗ್ಗುವ ತಗ್ಗು ಪ್ರದೇಶಗಳಲ್ಲಿನ ಚರಂಡಿಗಳಲ್ಲಿ, ಶೋಲ್ಡರ್ ಡ್ರೈನ್‌ಗಳಲ್ಲಿ, ಸುರಂಗ ಮಾರ್ಗಗಳು (ಅಂಡರ್‌ಪಾಸ್‌ಗಳನ್ನು) ಮತ್ತು ಅಗತ್ಯವಿರುವ ರಾಜ ಕಾಲುವೆಗಳಲ್ಲಿ ಬಿದ್ದಿರುವ ಹಳೆ ಕಸ, ಮಣ್ಣು ಗುಡ್ಡೆಗಳನ್ನು, ಅನಗತ್ಯ ಗಿಡಗಂಟೆಗಳನ್ನು ಕತ್ತರಿಸುವುದು, ಶೋಲ್ಡರ್ ಡ್ರೈನ್‌ಗಳ ಸ್ಲ್ಯಾಬ್‌ಗಳನ್ನು** ತೆಗೆದು ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿಯುವಂತೆ ಮಾಡಲು ಜರೂರಾಗಿ ಕ್ರಮವಹಿಸುವುದು.

ಸದರಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮಕ್ಕೆ ಎಲ್ಲಾ ಚುನಾಯಿತ ಪ್ರತಿನಿಧಿಗಳು, ನಗರ ಪಾಲಿಕೆ ಸದಸ್ಯರು, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (RWA), ಎನ್.ಜಿ.ಓ. (NGO), ಶುಚಿಮಿತ್ರ, Civic ಸಂಸ್ಥೆ, ಗಣ್ಯ ವ್ಯಕ್ತಿಗಳು, ಆಸಕ್ತಿ ಇರುವ ಶಾಲಾ ಶಿಕ್ಷಕರು ಹಾಗೂ ಶಾಲಾ ಮಕ್ಕಳನ್ನು, ಮತ್ತು ಹೆಚ್ಚಿನ ಪ್ರಚಾರ ಮಾಡಿ ಸಾರ್ವಜನಿಕರು ಕೂಡ ಪಾಲ್ಗೊಳ್ಳುವಂತೆ ಯೋಜನೆ ರೂಪಿಸಿ, ಎಲ್ಲರನ್ನೂ ತೊಡಗಿಸಿಕೊಂಡು ಯಶಸ್ವಿಗೊಳಿಸಲು ಸೂಚಿಸಿದೆ ಹಾಗೂ ಸದರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರಿಗೆ ಸ್ವಚ್ಛತಾ ವಸ್ತುಗಳಾದ ಪೊರಕೆ, ಕೈಚೀಲ, ಮಾಸ್ಕ್ ಇತ್ಯಾದಿಗಳನ್ನು ಪ್ರಾಯೋಜಕರಿಂದ ಕೊಡುಗೆ ಪಡೆದು ಸದರಿಯವರಿಗೆ ನೀಡಲು ಕ್ರಮವಹಿಸುವುದು ಹಾಗೂ ತಮ್ಮ ವಿಭಾಗ ವ್ಯಾಪ್ತಿಯಲ್ಲಿ ವಸತಿ ಸಮುಚ್ಛಯ, ವಾಣಿಜ್ಯ ಸಂಕೀರ್ಣ ನಿರ್ಮಿಸುತ್ತಿರುವ ಬಿಲ್ಡರ್ಸ್‌ರವರನ್ನು ಸಂಪರ್ಕಿಸಿ ಈ ಕಾರ್ಯಕ್ರಮಕ್ಕೆ ಕಾರ್ಮಿಕರನ್ನು ಕಳುಹಿಸಿಕೊಡುವಂತೆ ಮನವಲಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸೂಚಿಸಿದೆ.

ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮದ ವರದಿಯನ್ನು ವ್ಯಾಟ್ಸ್‌ಅಪ್ ಮೂಲಕ ಮತ್ತು ಈ ಕಛೇರಿಗೆ ಹಾರ್ಡ್‌ಕಾಪಿ ಕಳುಹಿಸಲು ವಲಯದ ಎಲ್ಲಾ ಅಪರ/ಜಂಟಿ ಆಯುಕ್ತರುಗಳಿಗೆ ಸೂಚಿಸಲಾಗಿದೆ.

5.5.16

ವಿಶೇಷ ಆಯುಕ್ತರು (ಘ.ತ್ಯಾ.ನಿ.)
ಬಿಬಿಎಂಪಿ

**ಪ್ರತಿಯನ್ನು:**

1. ಪೂಜ್ಯ ಮಹಾಪೌರರಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಉಪ ಮಹಾಪೌರರಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ವಿಶೇಷ ಆಯುಕ್ತರು(ಯೋಜನೆ), (ಹಣಕಾಸು), (ಕಲ್ಯಾಣ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6. ಅಪರ ಆಯುಕ್ತರು (ಆಡಳಿತ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
7. ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ನಿರ್ವಹಣೆ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ಪ್ರಧಾನ ಅಭಿಯಂತರರು ಮುಂದಿನ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.

9. ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ
10. ಎಲ್ಲಾ ವಲಯ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
11. ಮುಖ್ಯ ಅಭಿಯಂತರರು (ಮ.ನೀ.ಗಾ) ರವರಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
12. ಮುಖ್ಯ ಅಭಿಯಂತರರು (ಯೋಜನೆ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
13. ಮುಖ್ಯ ಅಭಿಯಂತರರು (ಟಿ.ವಿ.ಸಿ.ಸಿ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
14. ಮುಖ್ಯ ಅಭಿಯಂತರರು (ರ.ಮೂ.ಸೌ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ
15. ಅಪರ ನಿರ್ದೇಶಕರು (ನಗರಯೋಜನೆ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
16. ಜಂಟಿ ನಿರ್ದೇಶಕರು (ನ.ಯೋ-ದಕ್ಷಿಣ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
17. ಜಂಟಿ ನಿರ್ದೇಶಕರು (ನ.ಯೋ-ಉತ್ತರ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ
18. ಸಹಾಯಕ ಆಯುಕ್ತರು (ಕಲ್ಯಾಣ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
19. ಉಪ ನಿರ್ದೇಶಕರು (ನಗರಯೋಜನೆ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
20. ಉಪ ನಿರ್ದೇಶಕರು (ತೋಟಗಾರಿಕೆ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
21. ಉಪ ಆಯುಕ್ತರು (ಬೊಮ್ಮನಹಳ್ಳಿ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
22. ಉಪ ಆಯುಕ್ತರು (ದಕ್ಷಿಣ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
23. ಉಪ ಆಯುಕ್ತರು (ರಾಜರಾಜೇಶ್ವರಿ ನಗರ)ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
24. ಉಪ ಆಯುಕ್ತರು (ಮಹದೇವಪುರ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
25. ಜಂಟಿ ನಿರ್ದೇಶಕರು (ಪಶುಪಾಲನೆ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
26. ವಿದ್ಯಾಧಿಕಾರಿ ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
27. ಸಹಾಯಕ ಆಯುಕ್ತರು (ಆಸ್ತಿಗಳು)ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
28. ಸಹಾಯಕ ಆಯುಕ್ತರು (ಜಾಹೀರಾತು) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
29. ಸಹಾಯಕ ಆಯುಕ್ತರು (ಚುನಾವಣೆ) ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
30. ಎಲ್ಲಾ ವಲಯ ಅಧೀಕ್ಷಕ ಅಭಿಯಂತರರುಗಳಿಗೆ ಮುಂದಿನ ಅಗತ್ಯಕ್ರಮಕ್ಕಾಗಿ ಕಳುಹಿಸಿದೆ.
31. ಸಾರ್ವಜನಿಕ ಸಂಪರ್ಕಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
32. ಕಛೇರಿ ಕಡತಕ್ಕೆ.